**ಓ.ಎಸ್. ನಂಬರ್ : 25/2021**
**ಡಿ .ಡಬ್ಲ್ಯೂ : 1**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ : 17.02.2026

**ಪಾಟೀ ಸವಾಲು : ವಾದಿಯ ಪರವಾಗಿ ಶ್ರೀ ಡಿ.ಪಿ.ಕೆ.ಆರ್ ವಕೀಲರಿಂದ:**

ವಾದಿಗಳು ಯಾವ ವಿಚಾರದಲ್ಲಿ ನ್ಯಾಯಾಲಯದಲ್ಲಿ ದಾವಾವನ್ನು ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತು. ಈ ದಾವಾದ ಸರ್ವೆ ನಂಬರ್ ಗಳ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ಸರ್ವೆ ನಂಬರ್ ಗಳಿಗೂ ನನಗೂ ಏನು ಸಂಬಂಧ ಅಂದರೆ ಸದರಿ ಸ್ವತ್ತುಗಳನ್ನು 9 ನೇ ಪ್ರತಿವಾದಿ ಯಿಂದ ಖರೀದಿ ಮಾಡಿರುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಯಾವ ಯಾವ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತ್ತೇನೆ ಅಂದರೆ ಆರ್.ಟಿ.ಸಿ, ಮ್ಯೂಟೇಷನ್ ಮತ್ತು ಕ್ರಯ ಪತ್ರಗಳನ್ನು ಪರಿಶೀಲನೆ ಮಾಡಿರುತ್ತ್ತೇನೆ. ನಾನು ಸದರಿ ದಾಖಲಾತಿಗಳನ್ನು ವಕೀಲರ ಮೂಲಕ ಪರಿಶೀಲನೆ ಮಾಡಿರುತ್ತೇನೆ. ದಾವಾ ಆಸ್ತಿಯ ಮೇಲೆ ಬೇರೆ ಯಾರಿಗಾದರೂ ಹಕ್ಕು ಮತ್ತು ಅಧಿಕಾರ ಇದೆಯಾ ಎಂಬುದರ ಬಗ್ಗೆ ನಾನಾಗಲೀ ನನ್ನ ವಕೀಲರಾಗಲೀ ಪರಿಶೀಲಿಸಿರುತ್ತೀರಾ ಅಂದರೆ ನೋಡಿದ್ದೇವೆ ಎನ್ನುತ್ತಾರೆ. ದಾವಾ ಸ್ವತ್ತು 9 ನೇ ಪ್ರತಿವಾದಿಗಿಂತ ಮೊದಲು ಯಾರಿಗೆ ಹಕ್ಕು ಇತ್ತು ಎಂಬುದವರ ಬಗ್ಗೆ ಪರಿಶೀಲನೆ ಮಾಡಿರುತ್ತೀರಾ ಅಂದರೆ ದಾಖಲಾತಿ ಸರಿ ಇತ್ತು ಎನ್ನುತ್ತಾರೆ. 1 ರಿಂದ 3 ನೇ ಪ್ರತಿವಾದಿಗೆ ದಾವಾ ಸ್ವತ್ತು ವಂಶಪಾರಂಪರ್ಯವಾಗಿ ಬಂದಿದೆ ಎನ್ನುತ್ತಾರೆ. ದಾವಾ ಸ್ವತ್ತು ಇವರನ್ನು ಹೊರತುಪಡಿಸಿ ಬೇರೆ ಎಷ್ಟು ಜನರಿಗೆ ಸೇರಿತ್ತು ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತು ಮೊದಲನೇ ಪ್ರತಿವಾದಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮಡಿಕೇರಿ ಸಿವಿಲ್ ನ್ಯಾಯಾಲಯದಲ್ಲಿ ದಾವಾ ಇದ್ದ ವಿಚಾರ ಗೊತ್ತಾ ಅಂದರೆ ನಾವು ದಾಖಲಾತಿಯನ್ನು ಪರಿಶೀಲಿಸಿದಾಗ ಯಾವುದೇ ಕೇಸು

ಇರಲಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಇದೇ ನ್ಯಾಯಾಲಯದಲ್ಲಿ ದಾವಾ ಇನ್ನು ಬಾಕಿ ಇದೆ ಅಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ವಿಚಾರವನ್ನು ತಿಳಿದುಕೊಳ್ಳಲು ನಾನು ಪ್ರಯತ್ನಪಟ್ಟಿರುತ್ತೀರಾ ಅಂದರೆ ಇಲ್ಲ ಎನ್ನುತ್ತಾರೆ. ದಾವಾ ಸ್ವತ್ತಿಗೆ ವಾದಿಗಳು ಸಂಪೂರ್ಣ ಹಕ್ಕುದಾರರು ಎಂಬ ವಿಚಾರ ಗೊತ್ತಿದ್ದರೂ ಸಹ ನಾನು ಸದರಿ ಕ್ರಯ ಪತ್ರವನ್ನು ಬರೆಯಿಸಿಕೊಂಡಿರುತ್ತೇನೆ ಅಂದರೆ ಸರಿಯಲ್ಲ. ಈ ರೀತಿಯಾಗಿ ಹಕ್ಕು ಇರುವುದರಿಂದ ವಾದಿಗಳ ಹೇಳಿಕೆ ಮತ್ತು ಸಹಿಗಳನ್ನು ನಾನು ಪಡೆದುಕೊಂಡಿಲ್ಲ ಅಂದರೆ ನನಗೆ ಈ ವಿಚಾರ ಗೊತ್ತಿಲ್ಲ ಎನ್ನುತ್ತಾರೆ. ಈ ದಾವೆ ಹೂಡಿದ ನಂತರ ವಾದಿಗಳನ್ನು ವೈಯಕ್ತಿಕವಾಗಿ ಭೇಟಿ ಮಾಡಿ ದಾವೆ ಬಗ್ಗೆ ಕೇಳಿರುತ್ತೀರಾ ಅಂದರೆ ಇಲ್ಲ ಎನ್ನುತ್ತಾರೆ. ಪ್ರತಿವಾದಿ 9 ರಿಂದ 11 ರವರುಗಳು ನನ್ನ ಸ್ನೇಹಿತರು ಅಂದರೆ ನಾನು ಮತ್ತು 11 ನೇ ಪ್ರತಿವಾದಿಯವರು ಸ್ನೇಹಿತರು ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

**ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.**

ಓ.ಹೇ.ಕೇ.ಸರಿ ಇದೆ

**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು**
***ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,***
***ಸೋಮವಾರಪೇಟೆ.***